73

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-9534/2018/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.

ದಿನಾಂಕ : 03/01/2020
06/01/2020

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ**

ವಿಷಯ: ದೂರುದಾರರು ದೂರಿನಲ್ಲಿ ಹೇಳಿರುವ ಮುತ್ತೂರು ತಾಲ್ಲೂಕು ಶಾಂತಿಗೋಡು ಗ್ರಾಮದಲ್ಲಿ ಎಸ್.ಎಸ್.ಡಿ.ಆರ್.,/296/74-75 ರಂತೆ ಮಂಜೂರಾದ ಸರ್ವೆ ನಂ. 39/1ಬಿ4, ಸರ್ವೆ ನಂ. 47/1ಬಿಪಿ1 ಜಮೀನುಗಳ ದುರಸ್ತಿ ಕಾರ್ಯವನ್ನು ಮಾಡಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ದೂರುದಾರರಾದ ಶ್ರೀ ವಿಜಯಕುಮಾರ್.ಪಿ, ಮಾಜಿ ಸೈನಿಕ ಬಿನ್ ಲೇಟ್ ಟಿ.ಹುಕ್ರಪ್ಪ ಮಾಜಿ ಸೈನಿಕ, ಸೂತ್ರಬೆಟ್ಟು ಮನೆ, ಮುತ್ತೂರು ಅಂಚೆ, ಮುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ತಹಶೀಲ್ದಾರ್, ಮುತ್ತೂರು, ಕೆ.ಆರ್.ಪೇಟೆ ತಾಲ್ಲೂಕು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತಮ್ಮ ತಂದೆಯವರಿಗೆ ಸರ್ಕಾರದಿಂದ ನೀಡಲಾದ ಸ.39/1ಬಿ4, 47/1ಬಿಪಿ1 ರಲ್ಲಿನ ಜಮೀನನ್ನು ದುರಸ್ತಿಗೊಳಿಸಲು ನೀಡಿದ ಅರ್ಜಿ ಮತ್ತು ಕಡತವು ಎದುರುದಾರರು ಅಕ್ರಮವಾಗಿ ಲಭ್ಯವಿಲ್ಲವೆಂದು ತಿಳಿಸಿದ್ದು, ತದನಂತರ ತಾವು ಪುನ: ಅರ್ಜಿಯನ್ನು ದೃಢೀಕೃತ ನಕಲುಗಳೊಂದಿಗೆ ನೀಡಿದ್ದು, ಕೂಡಲೇ ದುರಸ್ತಿಗೊಳಿಸಲು ಕ್ರಮಕೈಗೊಳ್ಳಲು ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

3. ಎದುರುದಾರರ ಆಕ್ಷೇಪಣೆ ಕೋರಲಾಗಿ, ಆಕ್ಷೇಪಣೆಯನ್ನು ಸಲ್ಲಿಸಿ ಅದರಲ್ಲಿ ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಮುತ್ತೂರು ತಾಲ್ಲೂಕು ಶಾಂತಿಗೋಡು ಗ್ರಾಮದಲ್ಲಿ ಎನ್.ಎಸ್.ಡಿ.ಆರ್.,/296/74–75 ರಂತೆ ಮಂಜೂರಾದ ಸರ್ವೆ ನಂ. 41/1ಬಿ ರಲ್ಲಿ 1.32, 39/1ಬಿ4 ರಲ್ಲಿ 4.68 ಎಕರೆ ಜಮೀನು ಶ್ರೀ ಟಿ.ಹುಕ್ರಪ್ಪ ಎಂಬುವವರಿಗೆ ಮಂಜೂರಾದ ಜಮೀನು ಎಸ್.ಆರ್.ಟಿ.ಎಸ್.ಆರ್. 15/15–16 ರಂತೆ ಪ್ಲಾಟಿಂಗ್ ಮಾಡಲಾಗಿ ಸರ್ವೆ ನಂ. 47/1ಬಿ ರಲ್ಲಿನ 1.32 ಎಕರೆ ಜಮೀನು ಅನುಭವದಲ್ಲಿ 47/1ಎ1ಪಿ ರಲ್ಲಿ 1.32 ಬರುವುದೆಂದು ನಕ್ಷೆ ವರದಿ ಬಂದಿದ್ದು, ಸರ್ವೆ ನಂಬರ್ ತಿದ್ದುಪಡಿ ಮಾಡಲು ಮಾನ್ಯ ಸಹಾಯಕ ಕಮೀಷನರ್ ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸಹಾಯಕ ಕಮೀಷನರ್ ರವರು ಆರ್.ಆರ್.ಟಿ./ಸಿ.ಆರ್/81/2017–18, ದಿನಾಂಕ: 24/03/2014 ತಿದ್ದುಪಡಿ ಮಾಡಲು ಆದೇಶ ಮಾಡಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಕಡತ ಹಿಂದಿರುಗಿಸಿರುತ್ತಾರೆ. ಅದರಂತೆ, ಎಸ್.ಆರ್.ಟಿ.ಎಸ್.ಆರ್. 15/2015–16, ದಿನಾಂಕ: 25/05/2008 ರಂತೆ ಸರ್ವೆ ನಂ. 47/1ಬಿ ರಲ್ಲಿ 1.32 ಎಕರೆ, ಸರ್ವೆ ನಂ. 47/1ಎ1ಪಿ ರಲ್ಲಿ 1.32 ಎಕರೆ ತಿದ್ದುಪಡಿ ಮಾಡಲು ನಡವಳಿ ಆದೇಶ ಮಾಡಲಾಗಿದ್ದು, ಭೂಮಿ ಶಾಖೆಯಲ್ಲಿ ತಿದ್ದುಪಡಿ ಪ್ರಕ್ರಿಯೆಯಲ್ಲಿ ಇರುತ್ತದೆಂದು ದಿನಾಂಕ: 30/06/2018 ರಂದು ಪತ್ರ ಬರೆದು ತಿಳಿಸಿರುತ್ತಾರೆ. ಅದರ ಜೊತೆಗೆ ದಿನಾಂಕ: 24/03/2018 ರಂದು ಸಹಾಯಕ ಆಯುಕ್ತರು, ಮುತ್ತೂರು ಇವರ ಆರ್.ಆರ್.ಟಿ.ಸಿ.ಆರ್.(ಮುತ್ತೂರು)81/2017–18, ದಿನಾಂಕ: 24/03/2018 ನಡವಳಿಯ ಪ್ರತಿಯನ್ನು, ದಿನಾಂಕ: 25/05/2018, 30/11/2017ರ ತಮ್ಮ ಕಾರ್ಯಾಲಯದ ನಡವಳಿಗಳ ಪ್ರತಿಗಳನ್ನು ಹಾಜರುಪಡಿಸಿದ್ದಾರೆ.

4. ಎದುರುದಾರರಿಗೆ ಸದರಿ ವರದಿ ಸಲ್ಲಿಸಿದ ನಂತರ ತೆಗೆದುಕೊಂಡ ಕ್ರಮದ ಬಗ್ಗೆ ತಿಳಿಸುವಂತೆ ದಿನಾಂಕ: 13/07/2017 ರಂದು ಈ ಕಛೇರಿಯಿಂದ ತಿಳಿಸಲಾಗಿ, ಎದುರುದಾರರು ಯಾವುದೇ ವರದಿಯನ್ನು ಹಾಜರುಪಡಿಸಿಲ್ಲ.

5. ದೂರುದಾರರು ತಮ್ಮ ತಂದೆಗೆ ಸರ್ಕಾರದಿಂದ ನೀಡಲಾದ ಜಮೀನುಗಳನ್ನು ದುರಸ್ತು ಮಾಡುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದಾರೆ ಆದರೆ ಎದುರುದಾರರು ನಿರ್ದಿಷ್ಟ ಅವಧಿಯಲ್ಲಿ ಸೂಕ್ತ ಕ್ರಮ ಜರುಗಿಸದೇ ಇರುವುದರಿಂದ ತನಗೆ ತೊಂದರೆಯಾಗಿದ್ದು ಅದನ್ನು ಸರಿಪಡಿಸಿಕೊಡುವಂತೆ ಕೋರಿದ್ದರು. ಎದುರುದಾರರು ಸಲ್ಲಿಸಿರುವ ವರದಿ ಮತ್ತು ದಾಖಲೆಯಿಂದ ಈಗಾಗಲೇ ದೂರುದಾರರು ಕೋರಿರುವಂತೆ ಸದರಿ ಜಮೀನುಗಳ ದುರಸ್ತು ಕಾರ್ಯ ತಿದ್ದುಪಡಿ ಮಾಡುವ ನಡವಳಿಯ ಆದೇಶ

ಮಾಡಲಾಗಿದ್ದು, ಭೂಮಿ ಶಾಖೆಯಲ್ಲಿ ತಿದ್ದುಪಡಿ ಪ್ರಕ್ರಿಯೆಯಲ್ಲಿರುತ್ತದೆಂದು ತಿಳಿಸಿದ್ದಾರೆ. ಆದರೆ, ಅದು ಪೂರ್ಣಗೊಂಡ ಬಗ್ಗೆ ಯಾವುದೇ ರೀತಿಯ ವರದಿಯನ್ನು ಸಲ್ಲಿಸಿಲ್ಲ.

6. ಆದುದರಿಂದ, ದಾಖಲೆಗಳ ಆಧಾರಗಳಿಂದ, ದೂರುದಾರರು ದೂರಿನಲ್ಲಿ ಹೇಳಿರುವ ಪುತ್ತೂರು ತಾಲ್ಲೂಕು ಶಾಂತಿಗೋಡು ಗ್ರಾಮದಲ್ಲಿ ಎಸ್.ಎಸ್.ಡಿ.ಆರ್.,/296/74–75 ರಂತೆ ಮಂಜೂರಾದ ಸರ್ವೆ ನಂ. 39/1ಬಿ4, ಸರ್ವೆ ನಂ. 47/1ಬಿಪಿ1 ಜಮೀನುಗಳ ದುರಸ್ತಿ ಕಾರ್ಯವನ್ನು ಶೀಘ್ರವಾಗಿ ಮಾಡಿ ವರದಿ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗೆ ನಿರ್ದೇಶಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6-1-20

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.